ಸಿಒಡಿ ತನಿಖೆಯಾಗಿ 2848 ನಿವೇಶನಗಳನ್ನು ಅರ್ಹತೆ ಇಲ್ಲದವರಿಗೆ ಕೊಟ್ಟಿದ್ದಾರೆಂದು ವಜಾ ಆಗಿದೆ, ಇದು ಈ ಹಿಂದೆ ಬೆಂಗಳೂರು ನಗರ ವ್ಯಾಪ್ತಿಯಲ್ಲಾದಂಥದ್ದು. ಅದಾದ ಮೇಲೆ ಈ ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಹಂಚಿಕೆ ಮಾಡುವುದಕ್ಕೆ ಜಮೀನುಗಳನ್ನು ಖರೀದಿ ಮಾಡುವುದಕ್ಕೆ ಇಲ್ಲಿ ತುಂಬಾ ಬೆಲೆಬಾಳತಕ್ಕಂಥದ್ದು, ಮಾನ್ಯ ಗೃಹಸಚಿವರಿರುವ ಹೂಡಿಯಲ್ಲಿ ದೊಡ್ಡ ಹಗರಣವಾಗಿ ತನಿಖೆಯಾಯಿತು. ಸರ್ಕಾರಿ ಜಮೀನುಗಳು ಬಹಳಷ್ಟು ಇವೆ, ಇದರಲ್ಲಿ ಬಹಳಷ್ಟು ಜನರು ಒತ್ತುವರಿ ಮಾಡಿ ಸೇರಿಕೊಂಡಿದ್ದಾರೆ, ಅದನ್ನು ತೆರವು ಮಾಡಿಸುತ್ತಿದ್ದೇವೆ, ಅದು ನಮ್ಮ ಕಂದಾಯ ಇಲಾಖೆಯ ಮುಖಾಂತರ ಆಗುವಂಥಾದ್ದು. ಇದರ ಬಗ್ಗೆ ಶೇಕಡ 60 ಭಾಗದಷ್ಟು ಕೋರ್ಟಿನಲ್ಲಿ ಮೊಕದ್ದಮೆಗಳಿವೆ. ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಸಾವಿರಾರು ಎಕರೆ ಸರ್ಕಾರಿ ಜಮೀನಿರುವುದು ನಿಜ. ಅದನ್ನು ಆಯಾ ಕ್ಷೇತ್ರದಲ್ಲಿ ಕೊಡುವಂಥ ಕೆಲಸವನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ನಾನು ತಿಳಿಸಬಯಸುತ್ತೇನೆ.

ಶ್ರೀ ಆರ್. ಅಶೋಕ್ : ಅಲ್ಲಿ ಸಿಒಡಿ ತನಿಖೆ ಕಳೆದ ಐದು ವರ್ಷಗಳ ಹಿಂದೆಯೇ ಆಗಿದೆ. ಅದರ ವರದಿ ಕೂಡ ಈಗಾಗಲೇ ಸರ್ಕಾರಕ್ಕೆ ಬಂದಿದೆ. ಈಗಾಗಲೇ ಹೈಕೋರ್ಟ ಆದೇಶದ ಮೇಲೆ ಕೆಲವು ಸರ್ಕಾರಿ ಜಮೀನುಗಳನ್ನು ಕೂಡ ಬಿಡುಗಡೆ ಮಾಡಲಾಗಿದೆ. ಎಲ್ಲಾ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಿ, ನನ್ನ ಕ್ಷೇತ್ರದಲ್ಲಿ ಮಾತ್ರ ಈ ರೀತಿ ತಾರತಮ್ಯ ಮಾಡಿದರೆ ನನ್ನ ಕ್ಷೇತ್ರಕ್ಕೆ ಅನ್ಯಾಯವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಯವರು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಉತ್ತರಹಳ್ಳಿ ಕ್ಷೇತ್ರದಲ್ಲಿ 87 ಮತ್ತು 88ನೇ ಸರ್ವೇ ನಂಬರ್‌ನಲ್ಲಿ 26 ಎಕರೆ ಜಮೀನು ನಿವೇಶನ ಮಾಡಿ ಹಂಚುವುದಕ್ಕೆ ಬಂದಿದೆ. ಅವರು ಹೇಳಿದಂತೆ, ಸಿಒಡಿ ತನಿಖೆಯಲ್ಲಿ 2748 ನಿವೇಶನಗಳು ಅನರ್ಹವೆಂದು ವಜಾ ಆದಾಗ ಯಾರು ಅರ್ಹ ಫಲಾನುಭವಿಗಳಿದ್ದಾರೆ, ಅವರಿಗೆ ಅವನ್ನು ಕೊಡುವ ಕೆಲಸವನ್ನು ಮಾಡಿಕೊಡುತ್ತೇವೆ.

ಅಧ್ಯಕ್ಷರು : ಇಲ್ಲಿಗೆ ಚುಕ್ಕೆ ಗುರುತಿನ ಪ್ರಶ್ನೆಗಳು ಮುಗಿಯಿತು, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಬಚ್ಚೇಗೌಡರೆ ನೀವು ಮಂಡಿಸಿ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, 28ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 44 ಪ್ರಶ್ನೆಗಳ ಪೈಕಿ 32 ಪ್ರಶ್ನೆಗಳಿಗೆ ಉತ್ತರವನ್ನು ಈ ಸದನದ ಮುಂದೆ ಮಂಡಿಸುತ್ತಿದ್ದೇನೆ.